# ಅಹಂ ಇಲ್ಲದೆ ನನ್ನ ಕೆಲಸ ಮಾಡಬೇಕು



**ಸುಶ್ಮಿತ್ ಜೈನ್**
**ಉದಯ ಟೀವಿ 'ಕನ್ಯಾದಾನ'ದ ಕಾರ್ತೀಕ್**

**◆ ಅಭಿನಯಕ್ಕೆ ಸಿದ್ಧತೆ ಹೇಗಿತ್ತು?**

ಅಭಿನಯದ ಆಸೆ ಇತ್ತು. ಅದಕ್ಕೆ ಪೂರಕವಾದ ಸಿದ್ಧತೆ ಮತ್ತು ಪ್ರಯತ್ನವನ್ನು ಮಾಡಲಿಲ್ಲ. ನನ್ನಾಸೆ ಮತ್ತು ಆಸಕ್ತಿಯನ್ನು ಗುರುತಿಸಿದ ಪೋಷಕರು ಅದನ್ನು ಪೋಷಿಸಲು ಮುಂದಾದರು. ಅದಕ್ಕೆ ತಕ್ಕಂತೆ ನನ್ನ ಸ್ನೇಹಿತರು ಹುರಿದುಂಬಿಸಿದರು. ಅವರ ಅಭಿಲಾಷೆಯಂತೆ ಅಭಿನಯ ಕಲಿಯಲು ಮುಂದಾದೆ. ನಟನೆಗೆ ಸಂಬಂಧಿಸಿದಂತೆ ಒಂದು ವರ್ಷ ಅಧ್ಯಯನ ಮಾಡಿದೆ. ಆಗ ಆಡಿಷನ್ ನೀಡುವ ಬಗೆ ಗೊತ್ತಾಯಿತು. ಡಿಪ್ಲೊಮಾ ಮಾಡುವಾಗ ರಘುಚರಣ್ ಪರಿಚಯ ಆದರು. ಅವರೇ ಈ ಕ್ಷೇತ್ರಕ್ಕೆ ಕರೆದುಕೊಂಡುಬಂದರು. ನಟನೆಯ ಸೂಕ್ಷ್ಮವನ್ನು ಅರಿವಿಗೆ ತಂದವರು ದಿಲೀಪ್. 'ಸತ್ಯಂ ಶಿವಂ ಸುಂದರಂ' ನನ್ನ ಮೊದಲ ಧಾರಾವಾಹಿ. ನಂತರ 'ಭೂಮಿ ತಾಯಾಣೆ' ಮಾಡಿದೆ. 'ಮನಸೆಲ್ಲ ನೀನೇ'ಯಲ್ಲಿ ನಾಯಕನ ಅವಕಾಶ ನೀಡಿದರು. ನಾನೇ ಸ್ವತಃ ಇಷ್ಟಪಟ್ಟು ಪ್ರತಿನಾಯಕನ ಪಾತ್ರವನ್ನು ಮಾಡಿದೆ. 'ದೊರೆಸಾನಿ' ಮಾಡಿದ್ದೆ. ಈಗ 'ಕನ್ಯಾದಾನ'ದಲ್ಲಿದ್ದೇನೆ.

**◆ ಕೋವಿಡ್ ಸಂದರ್ಭ ನಿಮ್ಮಲ್ಲಿ ಉಂಟು ಮಾಡಿದ ಬದಲಾವಣೆಗಳೇನು?**

ಮನೆಯಲ್ಲಿ ನಮಗೆ ಕಷ್ಟ ಎಂದರೆ ಏನು ಅಂತ ಪರಿಚಯಿಸಿರಲಿಲ್ಲ. ಈ ಕ್ಷೇತ್ರಕ್ಕೆ ಬಂದ ಮೇಲೆ ಎಲ್ಲ ಆರಾಮಾಗಿ ನಡೀತಾಯಿತ್ತು. ಕಷ್ಟಪಟ್ಟು ಕೆಲಸವನ್ನೇನೋ ಮಾಡ್ತಾ ಇದ್ದೆ. ಅದರಿಂದ ಬಂದ ಸಂಭಾವನೆಯನ್ನು ಉಳಿಸಬೇಕು ಎನ್ನುವ ಬುದ್ಧಿವಂತಿಕೆ ಇರಲಿಲ್ಲ. ಬಂದದ್ದಲ್ಲ ಸಿಕ್ಕಾಪಟ್ಟೆ ಖರ್ಚು ಮಾಡುತ್ತಿದ್ದೆ. ಅದರಲ್ಲಿ ಅನಗತ್ಯ ಖರ್ಚೇ ಹೆಚ್ಚು ಆಗುತ್ತಿತ್ತು. ಲಾಕ್‌ಡೌನ್ ಅವಧಿಯಲ್ಲಿ ನನ್ನ ಕೈಯಲ್ಲಿ ದುಡ್ಡು ಇರಲಿಲ್ಲ. ನಮ್ಮ ಸಂಬಂಧಿಕರು, ಸಹೋದರ, ಸಹೋದರಿಯರು ವರ್ಕ್ ಫ್ರಮ್ ಹೋಮ್ ಎಂದು ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಅವರಿಗೆ ಸಂಬಳವೂ ಬರುತ್ತಿತ್ತು. ನನಗೆ ಕೆಲಸವೂ ಇಲ್ಲ ಸಂಪಾದನೆಯೂ ಇಲ್ಲ. ಆಗ ನನ್ನ ಹತ್ತಿರ ದುಡ್ಡು ಇರಲಿಲ್ಲ. ಇಷ್ಟು ದಿನ ಕೆಲಸ ಮಾಡಿಯೂ ಹಣ ಉಳಿಸಲಿಲ್ಲ ಎಂದು ಅನ್ನಿಸಿತು. ಈ ತಪ್ಪು ಮತ್ತೆ ಮಾಡಬಾರದು ಎನ್ನುವುದು ಮನವರಿಕೆ ಆಯಿತು. ಯಾವತ್ತೂ ನನಗೆ ಅಹಂ ಎಂಬುದು ಇಲ್ಲ. ಆದರೂ ದರ್ಪ ಇಲ್ಲದೆ ಪ್ರಾಮಾಣಿಕವಾಗಿ ನನ್ನ ಕೆಲಸವನ್ನು ಮಾಡಬೇಕು ಎನ್ನುವ ಸಂಕಲ್ಪವನ್ನು ನಾನು ಆ ಸಮಯದಲ್ಲಿ ಮಾಡಿದೆ.

**◆ ಕಾರ್ತೀಕ್ ಪಾತ್ರದ ಬಗ್ಗೆ ಏನೆನಿಸುತ್ತದೆ?**

ಚಿಕ್ಕವಯಸ್ಸಿನಿಂದಲೂ ಬಡತನದಲ್ಲಿ ಬೆಳೆದವನು. ಬಾಲ ಕಾರ್ಮಿಕನಾಗಿ ಕೆಲಸಮಾಡುತ್ತಿದ್ದ. ತಂದೆ ಇರಲ್ಲ, ತಾಯಿ ಇಡ್ಲಿ ಮಾರಿ ಬೆಳೆಸಿರುತ್ತಾಳೆ. ಅವನಿಗೆ ತಾಯಿ ಕಷ್ಟ ಏನು ಎಂದು ಗೊತ್ತಿರುತ್ತದೆ. ತಾಯಿಯೇ ಅವನಿಗೆ ಸರ್ವಸ್ವ. ಆಕೆಯ ಮಾತನ್ನೇ ಕೇಳುತ್ತಾನೆ. ಹೆಂಡತಿ ತಪ್ಪು ಮಾಡದಿದ್ದರೂ ಅದನ್ನು ಗುರುತಿಸುವುದಿಲ್ಲ. ಅಮ್ಮನೇ ಎಲ್ಲ. ತುಂಬ ತೂಕದ ವ್ಯಕ್ತಿತ್ವ. ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತಾನೆ. ಒಳ್ಳೆಯ ಮಾದರಿಯಲ್ಲಿ ಶ್ರಮವಹಿಸಿ ಅಭಿವೃದ್ಧಿಯಾಗುವುದು ಚೆನ್ನಾಗಿದೆ.

**◆ ಹೋಟೆಲ್‌ಗೆ ಹೋಗಿರ್ತೀರಿ. ಮಾಣಿ ನಿಮಗೆ ಅವಕಾಶವನ್ನು ಕೊಡಿಸಿ ಎಂದು ಕೇಳಿಕೊಂಡರೆ ಏನು ಮಾಡುತ್ತೀರಿ?**

ಅವಕಾಶ ಕೊಡಿಸುವ ಶಕ್ತಿ ನನಗೆ ಇಲ್ಲ ಎನ್ನುವುದನ್ನು ಮನವರಿಕೆ ಮಾಡುತ್ತೇನೆ. ಅಷ್ಟರಮಟ್ಟಿಗೆ ನಾನು ಬೆಳೆದಿಲ್ಲ ಎಂದು ಸಲಹೆಯನ್ನು ಕೊಡ್ತೀನಿ. ಆಡಿಷನ್ ಎಲ್ಲಿ ನಡೀತಿದೆ. ಸ್ಕ್ರೀನ್ ಟೆಸ್ಟ್ ಎಲ್ಲಿ ನಡೀತಿದೆ ಎಂದು ವಿವರವನ್ನು ಕೊಡ್ತೀನಿ. ನಿರ್ದೇಶಕರ ನಂಬರ್ ಕೊಡ್ತೀನಿ. ಅವರ ಕೌಶಲ್ಯ ಮತ್ತು ಪ್ರತಿಭೆಗೆ ಮನ್ನಣೆ ಸಿಗುತ್ತದೆ ಎಂಬ ಭರವಸೆಯನ್ನೂ ತುಂಬುತ್ತೇನೆ. ಅಭಿನಯ – ಕ್ಯಾಮೆರಾ ಎದುರಿಸುವುದನ್ನು ಸ್ವಲ್ಪ ಕಲಿಯಬೇಕು. ಅದಕ್ಕೆ ಸಣ್ಣ ಸಿದ್ಧತೆ ಇರಲಿ. ಯಾವುದೇ ಕಾರಣಕ್ಕೂ ಇರುವ ಕೆಲಸವನ್ನು ಬಿಟ್ಟು ಬರಬೇಡಿ. ಮನೆ ಕಡೆ ಚೆನ್ನಾಗಿದ್ದರೆ ಪರ್ವಾಗಿಲ್ಲ. ನಟನೆಯಿಂದ ಸಂಪಾದನೆ ತಕ್ಷಣ ಕೈಗೆ ಸಿಗುತ್ತದೆ ಎನ್ನುವಂತಿಲ್ಲ ಎಂದು ಹೇಳುತ್ತೇನೆ. ಈ ರೀತಿ ಸಾಕಷ್ಟು ಅನುಭವ ನನಗೆ ಆಗಿದೆ. ಆಗೆಲ್ಲ ಇದನ್ನೇ ಮಾಡಿದ್ದೇನೆ.

**◆ ನಿಮಗೆ ಯಾವ ರೀತಿಯ ಪಾತ್ರ ಇಷ್ಟ?**

ನನಗೆ ಕಾಮಿಡಿ ಮಾಡುವುದು ಇಷ್ಟ. ನನ್ನ ಧ್ವನಿ ಚೆನ್ನಾಗಿದೆ. ಅದಕ್ಕೆ ತಕ್ಕಂತೆ ಒಳ್ಳೆಯ ವಿಲನ್ ಪಾತ್ರವನ್ನು ಮಾಡಬೇಕು. ವಜ್ರಮುನಿ ರೀತಿಯಲ್ಲಿ ನೆಗೆಟಿವ್ ಶೇಡ್‌ನಲ್ಲಿ ನನ್ನನ್ನು ನಾನು ಗುರುತಿಸಿಕೊಳ್ಳಬೇಕು ಎಂದು ನಿರೀಕ್ಷೆ ಮತ್ತು ಆಸೆಯನ್ನು ಹೊಂದಿದ್ದೇನೆ. ಈಗ ವಿಲನ್ ಪಾತ್ರಕ್ಕೆ ಹೆಚ್ಚು ಬೇಡಿಕೆ ಇದೆ. ಸಾಮಾಜಿಕ ಮನ್ನಣೆಯೂ ಈ ಪಾತ್ರಗಳಿಗೆ ಸಿಗುತ್ತಿದೆ.

■ ರಾಘವೇಂದ್ರ ಕೆ.